# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 65 (609) |
| ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು |
| ಉತ್ತರಿಸುವ ದಿನಾಂಕ | : | 22.07.2024 |
| ಉತ್ತರಿಸುವ ಸಚಿವರು | : | ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

******

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಔಷಧಿ ಮತ್ತು ಕಾಂತಿವರ್ಧಕಗಳ ಗುಣಮಟ್ಟದ ವಿಶ್ಲೇಷಣೆಗಾಗಿ ಔಷಧಿ ಪರೀಕ್ಷಾ ಪ್ರಯೋಗಾಲಯಗಳನ್ನು ರಾಜ್ಯದಲ್ಲಿ ಎಲ್ಲೆಲ್ಲಿ ಸ್ಥಾಪಿಸಲಾಗಿದೆ; (ವಿವರ ನೀಡುವುದು) | ಔಷಧಿ ಮತ್ತು ಕಾಂತಿವರ್ಧಕಗಳ ಗುಣಮಟ್ಟದ ವಿಶ್ಲೇಷಣೆಗಾಗಿ ರಾಜ್ಯದಲ್ಲಿ 03 ಔಷಧ ಪರೀಕ್ಷಾ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದ್ದು, ವಿವರ ಕೆಳಕಂಡಂತಿದೆ.<br>1. ಔಷಧ ಪರೀಕ್ಷಾ ಪ್ರಯೋಗಾಲಯ, ಬೆಂಗಳೂರು<br>2. ಪ್ರಾದೇಶಿಕ ಔಷಧ ಪರೀಕ್ಷಾ ಪ್ರಯೋಗಾಲಯ, ಹುಬ್ಬಳ್ಳಿ<br>3. ಪ್ರಾದೇಶಿಕ ಔಷಧ ಪರೀಕ್ಷಾ ಪ್ರಯೋಗಾಲಯ, ಬಳ್ಳಾರಿ |
| ಆ) | ಔಷಧ ಪರೀಕ್ಷಾ ಪ್ರಯೋಗಾಲಯಗಳಿಗೆ ಮಂಜೂರಾಗಿರುವ, ಕರ್ತವ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿಯಿರುವ ಸರ್ಕಾರಿ ವಿಶ್ಲೇಷಕರ ಹುದ್ದೆಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) | ಔಷಧ ಪರೀಕ್ಷಾ ಪ್ರಯೋಗಾಲಯಗಳಿಗೆ ಮಂಜೂರಾಗಿರುವ, ಕರ್ತವ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿಯಿರುವ ಸರ್ಕಾರಿ ವಿಶ್ಲೇಷಕರ ಹುದ್ದೆಗಳ ಸಂಖ್ಯೆ ಕೆಳಕಂಡಂತಿರುತ್ತದೆ. |

| ಕ್ರ. ಸಂ | ಕಛೇರಿ | ಮಂಜೂರಾದ ಹುದ್ದೆ | ಭರ್ತಿ ಯಾದ ಹುದ್ದೆ | ಖಾಲಿ ಇರುವ ಹುದ್ದೆ |
|---|---|---|---|---|
| 1. | ಔಷಧ ಪರೀಕ್ಷಾ ಪ್ರಯೋಗಾಲಯ, ಬೆಂಗಳೂರು | 07 (+07 upgraded)* | 07+02 | 0+05* |
| 2 | ಪ್ರಾದೇಶಿಕ ಔಷಧ ಪರೀಕ್ಷಾ ಪ್ರಯೋಗಾಲಯ, ಹುಬ್ಬಳ್ಳಿ | 06 (+03 upgraded)* | 05 | 01+03* |
| 3 | ಪ್ರಾದೇಶಿಕ ಔಷಧ ಪರೀಕ್ಷಾ ಪ್ರಯೋಗಾಲಯ, ಬಳ್ಳಾರಿ | 06 (+03 upgraded)* | 03 | 03+03* |

ಸರ್ಕಾರದ ಆದೇಶ ಸಂಖ್ಯೆ:ಆಕುಕ 13 ಐಎಂಎಂ 2020, ದಿನಾಂಕ 03.02.2022 ಮತ್ತು 29.10.2022 ರಲ್ಲಿ 13 ಕಿರಿಯ ವೈಜ್ಞಾನಿಕ ಅಧಿಕಾರಿ ವೃಂದದ ಹುದ್ದೆಗಳನ್ನು ವೈಜ್ಞಾನಿಕ ಅಧಿಕಾರಿ ಹುದ್ದೆಗೆ ಮೇಲ್ದರ್ಜೆಗೇರಿಸಿ ಆದೇಶಿಸಲಾಗಿರುತ್ತದೆ.

...2

| | | |
|---|---|---|
| ಇ) | ಮೈಸೂರು ವಿಭಾಗದ ಔಷಧ ಮತ್ತು ಕಾಂತಿವರ್ಧಕಗಳ ಗುಣಮಟ್ಟವನ್ನು ಪರೀಕ್ಷಿಸಲು ಔಷಧ ಮಾದರಿಗಳನ್ನು ಪ್ರಸ್ತುತ ಯಾವ ಯಾವ ಔಷಧ ಪರೀಕ್ಷಾ ಪ್ರಯೋಗಾಲಯಗಳಿಗೆ ಕಳುಹಿಸಲಾಗುತ್ತಿದೆ; | ಮೈಸೂರು ವಿಭಾಗದ ಔಷಧ ಮತ್ತು ಕಾಂತಿವರ್ಧಕಗಳ ಮಾದರಿಗಳನ್ನು ಮೈಸೂರಿಗೆ ಹತ್ತಿರವಾಗಿರುವ ಔಷಧ ಪರೀಕ್ಷಾ ಪ್ರಯೋಗಾಲಯ. ಬೆಂಗಳೂರು ಇಲ್ಲಿಗೆ ವಿಶ್ಲೇಷಣೆಗಾಗಿ ಕಳುಹಿಸುತ್ತಿದ್ದಾರೆ. |
| ಈ) | ಮೈಸೂರು ವಿಭಾಗದಲ್ಲಿ ಔಷಧ ತಯಾರಿಕಾ ಘಟಕಗಳು, ದಾಸ್ತಾನು ಮಳಿಗೆಗಳು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಔಷಧ ಅಂಗಡಿಗಳು ಇರುವುದರಿಂದ ಔಷಧ ಮತ್ತು ಕಾಂತಿವರ್ಧಕಗಳ ಗುಣಮಟ್ಟ ಪರೀಕ್ಷಿಸಲು ಹಾಗೂ ವಿಶ್ಲೇಷಣಾ ವರದಿಗಳನ್ನು ತ್ವರಿತವಾಗಿ ನೀಡಲು ಅನುಕೂಲವಾಗುವಂತೆ ಮೈಸೂರು ವಿಭಾಗದಲ್ಲಿ ಪ್ರಾದೇಶಿಕ ಔಷಧ ಪರೀಕ್ಷಾ ಪ್ರಯೋಗಾಲಯ ಸ್ಥಾಪಿಸುವ ಕುರಿತು ಸರ್ಕಾರದ ನಿಲುವೇನು ? (ವಿವರ ನೀಡುವುದು) | ರಾಜ್ಯದಲ್ಲಿ ಇರುವ 398 ತಯಾರಿಕ ಘಟಕಗಳ ಪೈಕಿ, ಮೈಸೂರು ವಿಭಾಗದಲ್ಲಿ ಕೇವಲ 24 ತಯಾರಿಕಾ ಘಟಕಗಳು ಇದ್ದು, ಸುಮಾರು 4148 ಔಷಧ ಅಂಗಡಿಗಳು (50,000 ರಾಜ್ಯದಲ್ಲಿ ಔಷಧ ಅಂಗಡಿಗಳು) ಇರುತ್ತವೆ. ಆದರೆ ಔಷಧ ಪರೀಕ್ಷಾ ಪ್ರಯೋಗಾಲಯಗಳಿಗೆ ಯಾವುದೇ ತಯಾರಿಕಾ ಘಟಕಗಳಿಂದಾಗಲಿ ಮತ್ತು ಔಷಧ ಅಂಗಡಿಗಳಿಂದಾಗಲಿ ಔಷಧ ಮಾದರಿಗಳು ವಿಶ್ಲೇಷಣೆಗಾಗಿ ಸ್ವೀಕೃತವಾಗುತ್ತಿರುವುದಿಲ್ಲ. ಕೇವಲ ಇಲಾಖೆಯ ಅಮಲುಜಾರಿ ಅಧಿಕಾರಿಗಳಿಂದ ಔಷಧ ಮಾದರಿಗಳು ಸ್ವೀಕೃತಿಯಾಗುತ್ತಿದ್ದು, ಸದರಿ ಮಾದರಿಗಳನ್ನು ವಿಶ್ಲೇಷಣೆ ಮಾಡಲಾಗುತ್ತಿದೆ.<br><br>ಈ ನಿಟ್ಟಿನಲ್ಲಿ ಮೈಸೂರು ವಿಭಾಗದ ಅಮಲುಜಾರಿ ಅಧಿಕಾರಿಗಳಿಗೆ ಇಲಾಖೆಯ ಔಷಧ ಪರೀಕ್ಷಾ ಪ್ರಯೋಗಾಲಯಗಳಾದ ಬೆಂಗಳೂರು, ಬಳ್ಳಾರಿ, ಹುಬ್ಬಳ್ಳಿಗಳ ಪೈಕಿ ಮೈಸೂರು ವಿಭಾಗಕ್ಕೆ ಹತ್ತಿರವಿರುವ ಹಾಗೂ ಎಲ್ಲಾ ರೀತಿಯ ಔಷಧಿಗಳನ್ನು ವಿಶ್ಲೇಷಣೆ ಮಾಡುವ ಸವಲತ್ತುಗಳಿರುವ ಹಾಗೂ ಸಮರ್ಥನೀಯವಾಗಿರುವ ಬೆಂಗಳೂರು ಪ್ರಯೋಗಾಲಯಕ್ಕೆ ಕಳುಹಿಸಲು ನಿರ್ದೇಶಿಸಿದ್ದು, ಅದರಂತೆ ಸರ್ಕಾರಿ ವಿಶ್ಲೇಷಕರು, ಬೆಂಗಳೂರು ಪ್ರಯೋಗಾಲಯ ಇವರು ಔಷಧ ಮತ್ತು ಕಾಂತಿವರ್ಧಕ ನಿಯಾಮಗಳು 1945 ರ ನಿಯಮ 45 ರಡಿಯಲ್ಲಿ 60 ದಿನಗಳ ಒಳಗಾಗಿ ವಿಶ್ಲೇಷಣಾ ವರದಿಯನ್ನು ನೀಡುತ್ತಿದ್ದಾರೆ.<br><br>ಕೇಂದ್ರ ಸರ್ಕಾರದ ಪ್ರಾಯೋಜಿತ ಯೋಜನೆಯಡಿಯಲ್ಲಿ ಬೆಂಗಳೂರು ನಗರದ ಔಷದ ಪರೀಕ್ಷಾ ಪ್ರಯೋಗಾಲಯದ ವಿಶ್ಲೇಷಣಾ ಸಾಮರ್ಥ್ಯವನ್ನು ಉನ್ನತೀಕರಿಸಿ ವಿಸ್ತರಿಸಲಾಗಿರುತ್ತದೆ ಮತ್ತು ಬೆಂಗಳೂರು ಔಷದ ಪರೀಕ್ಷಾ ಪ್ರಯೋಗಾಲಯವು NABL Accreditation ಮಾನ್ಯತೆ ಪಡೆದಿದ್ದು, ಹುಬ್ಬಳ್ಳಿ ಹಾಗೂ ಬಳ್ಳಾರಿ ಔಷದ ಪರೀಕ್ಷಾ ಪ್ರಯೋಗಾಲಯಗಳು NABL Accreditation ಅನುಮೋದನೆಯನ್ನು ಪಡೆಯುವ ಹಂತದಲ್ಲಿರುತ್ತದೆ. ಪ್ರಸ್ತುತ ಬೆಂಗಳೂರಿನ ಔಷಧ ಪರೀಕ್ಷಾ ಪ್ರಯೋಗಾಲಯದಲ್ಲಿ ವಾರ್ಷಿಕ ಗರಿಷ್ಠ 7000 ಔಷಧ ಮಾದರಿಗಳ ವಿಶ್ಲೇಷಣಾ ಸಾಮರ್ಥ್ಯವನ್ನು ಹೊಂದಿರುತ್ತದೆ.<br><br>ಮೈಸೂರಿನಲ್ಲಿ ಹೊಸ ಪ್ರಯೋಗಾಲಯ ಸ್ಥಾಪಿಸುವುದರಿಂದ, ರಾಜ್ಯ ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆ ಉಂಟಾಗುತ್ತದೆ. ಅಲ್ಲದೆ ಮೈಸೂರು ವಿಭಾಗದ ಔಷಧ ವಿಶ್ಲೇಷಣಾ ಮಾದರಿಗಳನ್ನು ಈಗಾಗಲೇ ಬೆಂಗಳೂರಿನ ಔಷಧ ಪರೀಕ್ಷಾ ಪ್ರಯೋಗಾಲಯದಲ್ಲಿ ಮೇಲ್ಕಂಡಂತೆ ವಿಶ್ಲೇಷಣೆ ಮಾಡಲು ಕ್ರಮ ಕೈಗೊಳ್ಳುತ್ತಿರುವುದರಿಂದ, ಮೈಸೂರು ವಿಭಾಗದಲ್ಲಿ ಔಷಧ ಪರೀಕ್ಷಾ ಪ್ರಯೋಗಾಲಯಗಳನ್ನು ಸ್ಥಾಪಿಸುವುದು ಸಮಂಜಸವಲ್ಲ ಎಂದು ಸರ್ಕಾರಕ್ಕೆ ಔಷಧ ನಿಯಂತ್ರಕರು ಅಭಿಪ್ರಾಯಪಟ್ಟಿರುತ್ತಾರೆ. |

**ಸಂಖ್ಯೆ: ಆಕುಕ 183 ಪಿಟಿಡಿ 2024**

**( ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು